ಅಧ್ಯಕ್ಷರು (ಮಾನ್ಯ ಶ್ರೀ ವಿ. ವೆಂಕಟಪ್ಪನವರು).— 98ನೆಯ ಪ್ರಶ್ನೆಯೂ ಸಹ ಇದೇ ವಿಷಯಕ್ಕೆ ಸಂಬಂಧ ಪಟ್ಟಿರುವುದರಿಂದ ಈ ಪ್ರಶ್ನೆಯ ಜೊತೆಯಲ್ಲೇ ಅದನ್ನೂ ತೆಗೆದುಕೊಂಡರೆ ಒಳ್ಳೆಯದು.

Supply of adeguate quantity of Yarn to Hand Loom Weavers

*Q.—98. Sri GOVINDA DAS (Hassan District—Depressed Class).—

Will the Government be pleased to state :—

(*a*) the arrangement made for the supply of adequate quantity of yarn to the handloom weavers in the State;

(*b*) the actual quantity of yarn supplied to a loom per month;

(*c*) whether there are representations from the weavers stating that the present supply of yarn is adequate :

(*d*) the steps taken by the Department for the adequate supply of yarn?

A—The Hon'ble Sri T. MARIAPPA (Home Minister).—

(*a*) Out of the yarn bales received from theTextile Commissioner, Bombay, every month, arrangements have been made for the supply of yarn to the handloom weavers through the wholesale and retail yarn dealers and also through Government depots and Co-operative Societies in proportion to the basic quota and the actual quantity received.

(*b*) As the quota of yarn to the State has been reduced to a great extent *i.e.* from 1,483 to 516 bales (both for handlooms and powerlooms), two bundles were supplied up to November 1950 and one bundle subsequently.

(*c*) The present supply is not adequate.

(*d*) The Textile Commissioner, Bombay and also the Government of India have been addressed to restore the basic quota of yarn to the State. The Assistant Controller of Civil Supplies has also been sent to Bombay to contact the Textile Commissioner in the matter of getting adequate quota of yarn to the State.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಎಷ್ಟು ದಿವಸಕ್ಕೆ ಮೂರು ಕಟ್ಟು ಬೇಕಾಗುತ್ತದೆಂದು ಹೇಳುತ್ತೀರಿ?

ಮಾನ್ಯ ಶ್ರೀ ಟಿ. ಮರಿಯಪ್ಪನವರು (ಒಳಾಡಳಿತ ಸಚಿವರು).—ಚೆನ್ನಾಗಿ ಕೆಲಸ ಮಾಡುವವರಿಗೆ ತಿಂಗಳಿಗೆ ಮೂರು ಕಟ್ಟು ಬೇಕು; ಸುಮಾರಾಗಿ ಕೆಲಸ ಮಾಡುವರಿಗೆ ಎರಡು ಕಟ್ಟು ಬೇಕು.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಈಗ ತಿಂಗಳಿಗೆ ಕೊಡುವುದೆಷ್ಟು?

ಮಾನ್ಯ ಶ್ರೀ ಟಿ ಮರಿಯಪ್ಪನವರು.—ತಿಂಗಳಿಗೆ ಒಂದು ಕಟ್ಟು.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಕೈಮಗ್ಗಗಳಿಂದರೇ ಜೀವನ ಮಾಡುವವರಿಗೆ ತಿಂಗಳಿಗೆ ಒಂದು ಕಟ್ಟು ಕೊಟ್ಟರೆ ಜೀವನ ಹೇಗೆ ನಡೆಯಬೇಕು?

ಮಾನ್ಯ ಶ್ರೀ ಟಿ. ಮರಿಯಪ್ಪನವರು: ಬಲವಂತವಾಗಿಯೂ ನಡೆಯುವುದಿಲ್ಲ, ಕಷ್ಟವಿದೆ ಎಂಬುದನ್ನು ತಿಳಿದು ಅದನ್ನು ಇಂಡಿಯಾ ಸರ್ಕಾರಕ್ಕೂ ತಿಳಿಸಲಾಗಿದೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ತಾವು ಇದುವರೆಗೆ ಕೈಮಗ್ಗಗಳಿಗೆ ಮತ್ತು ಪವರ್‌ಲೂಮುಗಳಿಗೆ ಪಡೆದಿರುವ ಕೋಟಾ ಎಷ್ಟು?

ಮಾನ್ಯ ಶ್ರೀ ಟಿ. ಮರಿಯಪ್ಪನರು.—ಆ ಅಂಕಿ ಅಂಶಗಳು ಪ್ರತಿ ತಿಂಗಳಲ್ಲಿಯೂ ವ್ಯತ್ಯಾಸವಾಗಿವೆ. ಸಾಧಾರಣವಾಗಿ ತಿಂಗಳಿಗೆ 600, 700, 772 ಬೇಲುಗಳು ಬಂದಿವೆ. ಈಗ ಜನವರಿಗೆ 704 ಬೇಲುಗಳು ಅಲಾಟ್ ಆಗಿವೆ. ಎಷ್ಟು ನೂಲನ್ನು ಒದಗಿಸಲು ಸಾಧ್ಯವಿದೆಯೋ ಅಷ್ಟನ್ನು ಒದಗಿಸುತ್ತಿದ್ದಾರೆ. ಪವರ್ ಲೂಮುಗಳು ಮತ್ತು ಸಣ್ಣ ಕೈಗಾರಿಕೆಗಳು ಸೇರಿ 339 ಬೇಲುಗಳನ್ನೂ, ಕೈಮಗ್ಗಗಳಿಗೆ 357 ಬೇಲುಗಳನ್ನೂ ಒಂದು ಮಗ್ಗಕ್ಕೆ ಒಂದು ಕಟ್ಟಿನ ಪ್ರಕಾರ ಕೊಡಬೇಕೆಂದೂ ಮಾಡಿದ್ದಾರೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಕೈಮಗ್ಗಗಳವರಿಗೆ ಈಗಿನ ದೆಸೆ ಬರುವುದಕ್ಕೆ ನೂಲಿನ ಅಭಾವವೇ, ಕಾರ್ಖಾನೆಗಳೇ ಅಥವಾ ಬೇರೆ ಏನಾದರೂ ಕಾರಣವಿದೆಯೋ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೂಲಿನ ಅಭಾವದ ಜೊತೆಗೆ, ಅವರಲ್ಲಿ ಸಂಘಟನೆಯಿಲ್ಲದಿರುವುದು ಮುಂತಾದ ಕಾರಣಗಳೂ ಇವೆ.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಪವರ್‌ಲೂಮಿನ ಪೈಪೋಟಿಯಿಂದ ಅವರಿಗೆ ತೊಂದರೆಯಾಗಿದೆಯೆಂದು ಹೇಳಿದರೆ ಒಪ್ಪುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದೂ ಕೊಂಚಭಾಗ ಕಾರಣವಾಗಿದೆ. ದೊಡ್ಡದೃಷ್ಟಿಯಿಂದ ಎಲ್ಲಾ ವಿಷಯಗಳನ್ನೂ ಪರ್ಯಾಲೋಚಿಸಿ ಸರ್ಕಾರದವರು ನೂಲನ್ನು ರಿಸರ್ವ್ ಮಾಡಬಹುದು.

ಶ್ರೀ ಎಂ. ವಿ. ಕೃಷ್ಣಪ್ಪನವರು.—ಕೈಮಗ್ಗಗಳ ಉದ್ಧಾರಕ್ಕಾಗಿ ಅವರಿಗೆ ಹೆಚ್ಚು ಪ್ರೋತ್ಸಾಹ ಕೊಡುತಕ್ಕದ್ದು ನೂಕ್ತವಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ವಿಚಾರದಲ್ಲಿ ಕೇಂದ್ರ ಸರ್ಕಾರಕ್ಕೆ ಮನವಿ ಮಾಡಿದ್ದರ ಮೇಲೆ ಅವರು ಅದಕ್ಕೆ ತಕ್ಕ ಪ್ರಯತ್ನ ಮಾಡುವುದಾಗಿ ಹೇಳಿದ್ದಾರೆ.

ಅಧ್ಯಕ್ಷರು.—98ನೆಯ ಪ್ರಶ್ನೆಯನ್ನೂ ಇದರ ಜೊತೆಗೆ ತೆಗೆದುಕೊಂಡಿರುವುದರಿಂದ ಶ್ರೀ ಗೋವಿಂದ ದಾಸ್‌ರವರು ಆ ಪ್ರಶ್ನೆಯ ಮೇಲೆ ಬೇಕಾದ ವಿಷಯವನ್ನು ಕೇಳಬಹುದು.

ಶ್ರೀ ಗೋವಿಂದದಾಸ್‌ರವರು (ಹಾಸನ ಜಿಲ್ಲೆ–ನಿಮ್ನ ಪಂಗಡ).—ಈಗ ಕೊಡುತ್ತಿರುವ ಕೋಟ ಸಾಲದೆಂದು ಅನೇಕ ಕೈಮಗ್ಗಗಳವರಿಂದ ತಮಗೆ ವರದಿ ಬಂದಿದೆಯ ?

ಮಾನ್ಯ—ಶ್ರೀ ಟಿ. ಮರಿಯಪ್ಪನವರು.—ವರದಿ ಬಂದಿಲ್ಲ; ಅನೇಕ ಅರ್ಜಿಗಳು ಬಂದಿವೆ ಮತ್ತು ಖುದ್ದಾಗಿಯೂ ಬಂದು ಮನವಿಮಾಡಿಕೊಂಡಿದ್ದಾರೆ.

ಶ್ರೀ ಗೋವಿಂದದಾಸ್‌ರವರು.—ಶ್ರೀ ಎಂ. ವಿ. ಕೃಷ್ಣಪ್ಪನವರು ಹೇಳಿದಂತೆ ಇದರಿಂದಲೇ ಜೀವನಮಾಡುವವರಿಗೆ ಕೊಡುವ ನೂಲು ಸಾಲದೆಂದು ಬಹಳ ಕಡೆಯಿಂದ ಒತ್ತಾಯ ಬರುತ್ತಿರುವೆ !

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗ ಬರುತ್ತಿರುವ ಕೋಟ ಏನೇನೂ ಸಾಲದೆಂದು ಇಂಡಿಯಾ ಸರ್ಕಾರಕ್ಕೆ ತಿಳಿಸಿದ್ದೇವೆ. ಹೋದ ತಿಂಗಳನಲ್ಲಿ ಕೊಟ್ಟಿರುವುದು ಸಾಲದೆಂದು ಮನವಿ ಬಂದ ಮೇರೆ ಅದನ್ನು ತಿಳಿಸಿ ಜಾಸ್ತಿ ಮಾಡಬೇಕೆಂದು ಕೇಳಿದೆ.

ಶ್ರೀ ಜಿ. ವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಹರಿಹರ ಮತ್ತು ಮೊಳಕಾಲ್ಮುರು–ಈ ಪ್ರಾಂತಗಳಲ್ಲಿ ನೂಲಿಲ್ಲದೆ ಅನೇಕ ಮಿಲ್ಲುಗಳು ಕೆಲಸ ನಿಲ್ಲಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಸರ್ಕಾರದ ಗಮನಕ್ಕೆ ಬಂದಿಲ್ಲ. ನೂಲು ಕೊಟ್ಟಿರುವುದು ಸಾಲದೆಂದು ಹೇಳಬಹುದು. ಕೆಲವರಿಗೆ ಸರಕಾರದಲ್ಲಿ ಒದಗಿಸುವುದು ಕಷ್ಟವಾಯಿತು. ಈಗ ಪರಿಸ್ಥಿತಿ ಸ್ವಲ್ಪ ಉತ್ತಮಗೊಂಡಿದೆ.

ಶ್ರೀ ಜಿ. ವೀರಪ್ಪನವರು.—ಮೈಸೂರು ದೇಶದಲ್ಲಿ ಉತ್ಪತ್ತಿಯಾದ ನೂಲು ಹೊರಗೆ ಹೋಗಲು ತಾವು ಅವಕಾಶ ಕೊಡುತ್ತಿದ್ದೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮೈಸೂರು ದೇಶದಲ್ಲಿ ಅಥವಾ ಭಾರತದ ಇತರ ದೇಶಗಳಲ್ಲಿ ಉತ್ಪತ್ತಿಯಾಗುವ ನೂಲಿನ ಹತೋಟಿಯು ಕೇಂದ್ರ ಸರ್ಕಾರಕ್ಕೆ ಸೇರಿದೆ. ಅವರು ಕೊಡುವ ಕೋಟ ಮಾತ್ರ ನಾವು ತೆಗೆದುಕೊಳ್ಳಬೇಕೇ ಹೊರತು ಬೇರೆ ಏನೂ ಮಾಡುವಂತಿಲ್ಲ.

Sri G. VEERAPPA.—Are you instructed with regard to the distribution of yarn produced in the Mysore State ?

The Hon'ble Sri T. MARIAPPA.—Even with regard to yarn produced in the State, we have no control. What is allotted to Mysore we distribute.

Sri G. VEERAPPA.—Have Government taken any steps to prevent this sort of manufacture of yarn ?

The Hon'ble Sri T. MARIAPPA.—Government have got their own enforcement staff. We are not authorised to inspect these mills and have control over the type of yarn they produce.

ಶ್ರೀ ಜಿ. ವೀರಪ್ಪನವರು.—ಯಾವ್ಯಾವ ತರಹೆ ಬಟ್ಟೆ ತಯಾರುಮಾಡಬೇಕೆಂಬುದಾಗಿ ಯಾವ್ಯಾವ ಮಿಲ್ಲುಗೆ ವಹಿಸಿದ್ದಾರೆ ? ಇಂಡಿಯಾದಿಂದ ಹೊರಕ್ಕೆ ಕೂಡ ಕೆಲವರು ಕಳುಹಿಸುತ್ತಿದ್ದಾರೆ ಎಂಬುದು ಗಮನಕ್ಕೆ ಬಂದಿದೆಯೆ !

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಇಂಡೆಂಟ್ ರೀತ್ಯಾಗಿ ಗೊತ್ತಾಗಿದೆ. ಕೇಂದ್ರ ಸರ್ಕಾರಕ್ಕೆ ಸದರಿ ವಿಚಾರವನ್ನು ಅರಿಕೆಮಾಡಿದ ಮೇರೆ ಹೊರದೇಶದ ಪ್ರವೇಣರನ್ನು ನಿಯಮಿಸಿದ್ದಾರೆ. ಅವರು ಆದನ್ನು ನೋಡಿಕೊಳ್ಳುತ್ತಾರೆ. ಮುಖ್ಯವಾಗಿ ಹತ್ತಿಯ ಅಭಾವವೇ ನ್ಯೂನವಾದ ಕಾರಣವೆಂಬುದು ಮಾನ್ಯ ಸದಸ್ಯರನೇಕರಿಗೆ ಗೊತ್ತಿರಬಹುದು. ಅಲ್ಲದೆ ಬೊಂಬಾಯಿನಲ್ಲಿ ಮುಷ್ಕರವಾದ ಮೇರೆ ಉತ್ಪತ್ತಿಯು ಕಡಮೆಯಾಗಿದೆ.

ಶ್ರೀ ಎಚ್. ಹುಚ್ಚೆಮಾಸ್ತಿಗೌಡರು (ತುಮಕೂರು ಜಿಲ್ಲೆ).—ಈ ವಿಚಾರದಲ್ಲಿ ತಪ್ಪುಮಾಡಿದ ಎಷ್ಟು ಮಂದಿ ಮಗ್ಗಗಳವರಿಗೆ ಶಿಕ್ಷೆಯಾಗಿದೆ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್ ಬೇಕು.

ಶ್ರೀ ಎಚ್. ಹುಚ್ಚೆಮಾಸ್ತಿಗೌಡರು.—ಕೋ–ಆಪರೇಟಿವ್ ಸೊಸೈಟಿಗಳ ಮೂಲಕ ನೂಲನ್ನು ಹಂಚಿಕೆಮಾಡುವ ಪ್ರಯತ್ನವಿದೆಯೆಂದು ತಿಳಿಯಿತು. ಹಾಗಾದರೆ ಎಷ್ಟು ದಿವಸದಲ್ಲಿ ಅದನ್ನು ಜಾರಿಗೆ ತರುತ್ತೀರಿ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಬಗ್ಗೆ ಕಾರ್ಯಕ್ರಮ ಕೈಗೊಂಡಿದೆ. ಕೋಟ ಬಂದಮೇರೆ ಅದನ್ನು ಜಾರಿಮಾಡಬೇಕೆಂದು ತೀರ್ಮಾನವಾಗಿದೆ.

ಶ್ರೀ ಎಚ್. ಹುಚ್ಚೆಮಾಸ್ತಿಗೌಡರು.—ಹಾಗಾದರೆ ಒಟ್ಟು ವ್ಯಾಪಾರಿಗಳನ್ನು, ಸಂಪೂರ್ಣವಾಗಿ ತಪ್ಪಿಸಿ ಎಲ್ಲವನ್ನೂ ಸೊಸೈಟಿಗಳಿಗೇ ಕೊಡುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆ ಪ್ರಶ್ನೆ ಇಲ್ಲಿ ಉದ್ಭವಿಸುವುದಿಲ್ಲ. ಸರಿಯಾದ ರೀತಿಯಲ್ಲಿ ಹಂಚಿಕೆ ವ್ಯವಸ್ಥೆ ಮಾಡಲಾಗುತ್ತದೆ.

ಶ್ರೀ ಎಚ್. ಹುಚ್ಚೆಮಾಸ್ತಿಗೌಡರು.—ಬೆಂಗಳೂರಿನ ಒಟ್ಟು ವ್ಯಾಪಾರಿಗಳು ಹಳ್ಳಿಗಳಲ್ಲರುವ ಚಿಲ್ಲರೆ ವರ್ತಕರಿಗೆ ನೂಲನ್ನು ಹಂಚುತ್ತಾರೆ. ಆದ್ದರಿಂದ ಕೇಂದ್ರದಲ್ಲಿ ಸೊಸೈಟಿಗಳು ಮಾಡುವ ಕೆಲಸವೇನು ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನು ಇಷ್ಟುಮಟ್ಟಿಗೆ ಹಂಚಬೇಕೆಂದು ಸೂಚಿಸಲು ಒಂದು ಸಮಿತಿಯಿದೆ.

ಶ್ರೀ ಎಸ್. ರಂಗರಾಮಯ್ಯನವರು (ಮೈಸೂರು ಜಿಲ್ಲೆ).—ಕೈಮಗ್ಗದವರಿಗಾಗಿ, ನೇಕಡಾ 10-15ರಷ್ಟು ನೂಲನ್ನು ಸರ್ಕಾರಿ ಡಿಪೋಗಳ ಮೂಲಕ ಹಂಚಿಕೆಮಾಡಿಸಿ ವಿಕ್ಕಿಧ್ಯವನ್ನು ರೈಸೆಕ್‌ಷ್ಡ್ ವರ್ತಕರ ಮುಖಾಂತರ ಕೊಡಲಾಗುತ್ತಿದೆಯೆಂದು ಹೇಳಿದ್ದೀರಿ. ಇವರುಗಳು ಸರಿಯಾಗಿ ಸರಬರಾಯಿ ಮಾಡುತ್ತಿಲ್ಲವೆಂದು ತಮಗೆ ದೂರುಗಳೇನಾದರೂ ಬಂದಿವೆಯೇ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಮಗೇನೂ ಹಾಗೆ ಯಾವುದೂ ಬಂದಿಲ್ಲ. ಇಂಥಾದ್ದು ಆಗಬಹುದೆಂತರೇ, ಕೈಮಗ್ಗದ ಕೋ–ಆಪರೇಟಿವ್ ಸೊಸೈಟಿಗಳಾದ ಮೇರೆ, ಈ ಚಿಲ್ಲರೆ ವರ್ತಕರನ್ನು ತಪ್ಪಿಸಿ ಸೊಸೈಟಿಗಳ ಮೂಲಕವೇ ಹಂಚಿಕೆಮಾಡಿಸಬೇಕೆಂದು ಯೋಚಿಸಿದೆ.

ಶ್ರೀ ಎಸ್. ರಂಗರಾಮಯ್ಯನವರು.—ಉತ್ತರದ (ಬಿ) ಭಾಗದಲ್ಲಿ "Popularising the use of improved tools and appliances" ಎಂದು ಹೇಳಿ ಫ್ಲೈ-ಷೆಟಲ್ ಮುಂತಾದುವುಗಳನ್ನು ಉಪಯೋಗಿಸುವ ಏರ್ಪಾಡುಮಾಡಿದೆಯೆಂದು ಹೇಳಿದ್ದೀರಿ. ಈ ಉಪಕರಣಗಳನ್ನು ಎಷ್ಟುಜನ ಈಗ ಉಪಯೋಗಿಸಲು ತೊಡಗಿದ್ದಾರೆಂಬುದನ್ನು ಹೇಳುತ್ತೀರಾ ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಹೆಚ್ಚು ಹೆಚ್ಚಾಗಿ ಜನರಲ್ಲಿ ರೂಢಿಗೆ ಬರುತ್ತಿದೆಯೆಂದು ಹೇಳಬಲ್ಲೆ. ಆದರೆ ಎಷ್ಟು ಜನರು ಉಪಯೋಗಿಸುತ್ತಿದ್ದಾರೆಂದು ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ರಂಗರಾಮಯ್ಯನವರು.—ಇದು ಹೆಚ್ಚಿಗೆ ರೂಢಿಗೆ ಬಂದುತ್ತಿದೆಯೆಂದು ಹೇಳಿದರೆ, ಹಾಲು ಕೊಡುವ ನೂಲೇ ಅವರಿಗೆ ಸಾಲದಿರುವಾಗ, ಇವುಗಳನ್ನು ಉಪಯೋಗಿಸುವುದಕ್ಕೆ ತೊಡಗಿದರೆ ಒಂದಕ್ಕೆ ಹತ್ತರಷ್ಟು ಉತ್ಪತ್ತಿ ಶಕ್ತಿ ಹೆಚ್ಚಿದರೆ, ಅವರಲ್ಲಿ ನಿರುದ್ಯೋಗ ಇನ್ನೂ ಜಾಸ್ತಿಯಾಗುವುದಿಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದಕ್ಕೆ ಉತ್ತರ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಚ್. ಸಿದ್ದವೀರಪ್ಪನವರು (ಚಿತ್ರದುರ್ಗ ಜಿಲ್ಲೆ).—ಕೈಮಗ್ಗದವರಿಗೆ, ಪವರ್ ಲೂಮಿನವರಿಗೆ ಮತ್ತು ಸಣ್ಣ ಪುಟ್ಟ ಕೈಗಾರಿಕೆಗಳವರಿಗೆ ನೂಲನ್ನು ಹಂಡುವ ಏರ್ಪಾಡುಮಾಡಿದೆಯೆಂದು ಹೇಳಿದಿರಿ. ಇದರಲ್ಲಿ ಕೈಮಗ್ಗದವರಿಗೆಷ್ಟು ಕೊಡುತ್ತಿದೆ, ಸಣ್ಣ ಪುಟ್ಟ ಕೈಗಾರಿಕೆಗಳವರಿಗೆಷ್ಟು ಕೊಡುತ್ತಿದೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಆಯಾ ತಿಂಗಳು ನಮಗೆ ಬರುವ ಕೋಟಾವನ್ನು ಅವಲಂಬಿಸಿರುತ್ತದೆ. ಉದಾಹರಣೆಗೆ, ಈ ಸಲ ಜನವರಿಯಲ್ಲಿ ಬಂದ 704 ಬೇಲುಗಳಲ್ಲಿ 339 ಬೇಲುಗಳನ್ನು ಪವರ್ ಲೂಮು, ನಟ್ಟ ಪುಟ್ಟ ಕೈಗಾರಿಕೆಗಳು ಮುಂತಾದುವುಗಳಿಗೆ ಕೊಟ್ಟಿದ್ದೇವೆ; ಕೈಮಗ್ಗದವರಿಗೆ 365 ಬೇಲುಗಳನ್ನು ಕೊಟ್ಟಿದ್ದೇವೆ.

ಶ್ರೀ ಎಚ್. ಸಿದ್ದವೀರಪ್ಪನವರು.—ತಾವೀಗ ಸರಬರಾಯಿ ಮಾಡುತ್ತಿರುವ ನೂಲು, ಅದನ್ನು ಯಾವ ಉದ್ದೇಶಕ್ಕಾಗಿ ಕೊಡುತ್ತಿದೆಯೋ ಅದಕ್ಕೇ ಉಪಯೋಗಿಸರಾಗುತ್ತಿದೆಯೇ ಅಥವಾ ಇಲ್ಲವೇ ಎಂಬುದನ್ನು ನೋಡಿಕೊಳ್ಳುವುದಕ್ಕೆ ಯಾರನ್ನಾದರೂ ನೇಮಿಸಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—'Enforcement Staff' ಎಂಬ ಒಂದು ಸಿಬ್ಬಂದಿ ನೇಮಕವಾಗಿದೆ. ಆದರೂ ನೂಲು ತೆಗೆದುಕೊಳ್ಳುವವರೆಲ್ಲರೂ ತಪ್ಪಿತಸ್ಥರೆಂದೇ ಭಾವಿಸಕೂಡದು. ಮುಖ್ಯವಾಗಿ ಈಗ ಸ್ವಲ್ಪವಷ್ಟಿಗೆ ನೂಲಿನ ಅಭಾವ ಇರುವುದರಿಂದ ಎಷ್ಟೋ ಜನರು ನೂಲನ್ನು ಕೊಂಡು ಬಟ್ಟೆ ಮಾಡುವುದಕ್ಕಿಂತ ನೂಲನ್ನೇ ಮಾರುವುದು ಲಾಭದಾಯಕವೆಂದು ಕೆಲವರು ಮಾರಿಬಿಡುತ್ತಾರೆ, ಅಷ್ಟೆ.

ಶ್ರೀ ಎಚ್. ಸಿದ್ದವೀರಪ್ಪನವರು.—ಮದ್ರಾಸು ಮತ್ತು ಬೊಂಬಾಯಿ ಪ್ರಾಂತಗಳಲ್ಲಿ ಇದಕ್ಕಾಗಿ ಒಂದು ಕೋ-ಆಪರೇಟಿವ್ ಸೊಸೈಟಿಯನ್ನು ಸ್ಥಾಪನೆಮಾಡಿ ಅದರ ಮೂಲಕ ಹಂಚಿಕೆ ಮಾಡಿಸಿ ಬಟ್ಟೆ ಮಾಡಿಸುತ್ತಿದ್ದಾರೆಂಬುದು ತಮಗೆ ಗೊತ್ತಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮದ್ರಾಸಿನಲ್ಲಿ ಮತ್ತು ಇತ್ತೀಚೆಗೆ ಬೊಂಬಾಯಿನಲ್ಲಿ ಈ ರೀತಿ ಏರ್ಪಾಡು ಮಾಡಿದ್ದಾರೆಂಬುದು ಗೊತ್ತು. ಇದನ್ನು ನೋಡಿಕೊಂಡುಬರಲು ನಾವೂ ಕೂಡ ಬೊಂಬಾಯಿಗೆ ನಮ್ಮ ವರೊಬ್ಬರನ್ನು ಕಳುಹಿಸಿಕೊಟ್ಟು ಅಲ್ಲಿ ಈ ಪ್ರೊವಿನ್ಷಿಯಲ್ ಕೋ-ಆಪರೇಟಿವ್ ಸೊಸೈಟಿಯು ಯಾವ ರೀತಿ ಕೆಲಸ ಮಾಡುತ್ತಿದೆಯೆಂಬುದನ್ನು ತಿಳಿದುಬಂದು, ಇಲ್ಲಿಯೂ 200ಕ್ಕೆ ಮೇಲ್ಪಟ್ಟಿರುವ ಮಗ್ಗಗಳವರನ್ನೂ ಸರ್ಕಾರಿ ಕೈಗಾರಿಕೋದ್ಯಮಿಗಳವರೊಡನೆ ಸೇರಿಸಿಕೊಂಡು, ಈ ಕೋ-ಆಪರೇಟಿವ್ ಸೊಸೈಟಿಗಳ ಮೂಲಕ ನೂಲು ಹಂಚಿಕೆ, ಮುಖ್ಯ ಮುಖ್ಯವಾದ ಡಿಸೈನುಗಳನ್ನು ಮಾಡಿಸಿಕೊಡುವುದು ಮುಂತಾದುವುಗಳಿಗೆ ತಕ್ಕ ಏರ್ಪಾಡು ಮಾಡಿದ್ದಾರೆ. ಬಹುಷಃ ಈ ವಾರ ಮುಗಿಯುವುದರೊಳಗೇ ಜಾರಿಗೆ ಬರಬಹುದು.

ಶ್ರೀ ಎಚ್. ಸಿದ್ದವೀರಪ್ಪನವರು.—ನೂಲಿನ ಪರಿಸ್ಥಿತಿ ಇಷ್ಟು ಕೆಟ್ಟಿರುವಾಗ ಸರ್ಕಾರದವರೇ ಸಂಪೂರ್ಣ ಹತ್ತಕೋಟಿ ವಹಿಸಿ ಎಲ್ಲರಿಗೂ ಹಂಚಿಕೆಮಾಡುವ ಏರ್ಪಾಡು ಮಾಡುವುದರಲ್ಲೇನಾದರೂ ಪ್ರತಿಬಂಧಕವಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗಲೂ ನಂಗ್ರಹಣೆ ಮಾಡುವುದರಲ್ಲಿ ಮತ್ತು ಹಂಚಿಕೆಮಾಡುವುದರಲ್ಲಿ ಏನೂ ತೊಂದರೆ ಕಂಡುಬಂದಿಲ್ಲ. ಇರುವ ತೊಂದರೆಯೆಂದರೆ, ನಮಗೀಗ ಸಾಕಾದಷ್ಟು ನೂಲು ಸರಬರಾಯಿಯಾಗುತ್ತಿಲ್ಲ. ನಮಗೆ ಹಿಂದೆ ಎಷ್ಟು ಹೆಚ್ಚಿಗೆ ಬರುತ್ತಿತ್ತೆಂಬುದನ್ನು ಸ್ವಲ್ಪ ತಿಳಿಸಿದರೆ ಇದು ಬಹುಷಃ ವಿಶದವಾಗುತ್ತದೆ. ಹೋದ ಜೂನ್‌ನಲ್ಲಿ ನಮಗಾರು 1,720 ಬೇಲುಗಳೂ, ಜುಲೈನಲ್ಲಿ 2155 ಬೇಲುಗಳೂ, ಆಗಸ್ಟ್‌ನಲ್ಲಿ 1401 ಬೇಲುಗಳೂ ಬಂದವು. ಆಗ ಅಷ್ಟು ಜಾಸ್ತಿ ಬರುತ್ತಿದ್ದಾಗ ಎಷ್ಟೋ ಜನರು – ಕೊಂಡು ಕೊಳ್ಳಲೇ ಇಲ್ಲ. ಆಗೇನಾದರೂ ಹೆಚ್ಚಿಗೆ ನರ್ಕಾರದವರು ಕೂಂಡಿದ್ದರೆ ಲಕ್ಷಾಂತರ ರೂಪಾಯಿ ನಷ್ಟವಾಗುತ್ತಲಿತ್ತು. ಆದ್ದರಿಂದ ಏನಿದ್ದರೂ, ಈ ರೀತಿ ಹೆಚ್ಚಿಗೆ ಕೊರತೆಯಿರುವಾಗ ಈ ತೊಂದರೆಗಳು ಬರುತ್ತವೆ. ಬೇಕಾದರೆ ನಿಮಗೆ ಒಂದು ವರ್ಷದ ಅಂಕಿ ಅಂಶಗಳನ್ನು ಕೊಟ್ಟು ತೋರಿಸುತ್ತೇನೆ. ಹಿಂದೆ ಅಷ್ಟು ಹೆಚ್ಚಿಗೆ ಬರುತ್ತಿದ್ದುದು ಈಗ 600 ಬೇಲುಗಳಿಗೆ ಇಳಿದುಬಿಟ್ಟರೆ ತೊಂದರೆಯಾಗುತ್ತದೆಂದು ಹೇಳಬೇಕಾಗಿಲ್ಲ.

ಶ್ರೀ ಟಿ. ಮಾದಯ್ಯಗೌಡರು (ಬೆಂಗಳೂರು ಜಿಲ್ಲೆ).—ಒಂದು ಮಗ್ಗಕ್ಕೆ ಮೂರು ಕಟ್ಟುಗಳು ಬೇಕೆಂದು ಹೇಳಿದಿರಿ. ಹೀಗಿರುವಲ್ಲಿ ಅವರಿಗೆ ಒಂದು ಕಟ್ಟು ಮಾತ್ರ ಕೊಟ್ಟರೆ, ಕೈಮಗ್ಗದಿಂದಲೇ ಜೀವನ ನಡೆಸಬೇಕಾಗಿರುವವರಿಗೆ ಸಾಕಾದಷ್ಟು ಕೆಲಸವಿಲ್ಲದೆ ಹೋಗಿ ಅವರು ಕ್ಷೀಣದೆಶೆಗೆ ಬಂದಿರುವುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈ ನವೆಂಬರಿನಿಂದೀಚೆಗೆ ಈ ಕಷ್ಟ ಬಂದಿದೆ, ಅಷ್ಟೆ.

ಶ್ರೀ ಟಿ. ಮಾದಯ್ಯಗೌಡರು.—ಆದರೂ, ಮೂರು ಬೇಲುಗಳನ್ನು ಕೊಡುವ ಕಡೆ ಒಂದು ಬೇಲು ಕೊಟ್ಟರೆ ಪೂರ್ತಿ ಉದ್ಯೋಗ ದೊರಕದೆ, ಪೂರಾ ಕಾಲವನ್ನು ಉಪಯೋಗಿಸಿಕೊಳ್ಳುವುದಕ್ಕೆ ಅನ್ನವಿಲ್ಲದೆ ನೇಯುವಾರಿ ತನಕ್ಕಿಳಿದು ಕ್ಷೀಣವಾಗುತ್ತಿದ್ದಾರೆಂಬುದು ತಮ್ಮಗೆ ಗೊತ್ತಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಸ್ವತಸ್ಸಿದ್ಧವಾಗಿದೆ.

ಶ್ರೀ ಟಿ. ಮಾದಯ್ಯಗೌಡರು.—ಈ ಕಾರಣದಿಂದಲೇ ಅವರು ತಮಗೆ ಸಿಕ್ಕುವ ಅಲ್ಪ ಕೋಟಾವನ್ನು ಬೇರೆಯವರಿಗೆ ಮಾರಿಬಿಟ್ಟು, ಇತರೇ ಯಾವುದಾದರೂ ಕೆಲಸಗಳಲ್ಲಿ ಉದ್ಯುಕ್ತರಾಗುತ್ತಿರುವುದು ತಮಗೆ ಗೊತ್ತಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ.

ಶ್ರೀ ಟಿ. ಮಾದಯ್ಯಗೌಡರು.—ಅನೇಕ ಕಡೆ ವರ್ತಕರುಗಳು ತಮ್ಮ ಕಡೆ ಹೆಚ್ಚು ಮಗ್ಗಗಳಿವೆಯೆಂದು ಹೆಚ್ಚಿನ ಅಂಕಿಗಳನ್ನು ಕೊಟ್ಟು ಅದರಂತೆ ನೂಲು ಅವರಿಗೆ ಸರಬರಾಯಿಯಾಗುತ್ತಿದೆಯೆಂಬುದು ತಮಗೆ ಗೊತ್ತಿದೆಯೇ? ಅಲ್ಲಿ ನಿಜವಾಗಿಯೂ ಎಷ್ಟು ಮಗ್ಗಗಳಿವೆ, ಎಲ್ಲಿ ಈ ಮಗ್ಗಗಳಿವೆಯೆಂಬುದನ್ನು ನೋಡುವುದಕ್ಕೂ ಕೂಡ ಅವಕಾಶ ಕೊಡುತ್ತಿಲ್ಲವೆಂಬುದು ತಮಗೆ ಗೊತ್ತಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಮೊದಲು 35,000 ಮಗ್ಗಗಳಿವೆಯೆಂದು ಹೇಳಿದ್ದರು. ಈಚೆಗೆ ಇದನ್ನು ವಿಚಾರಮಾಡಿ ನೋಡಿದ್ದೇವೆ. ನಮ್ಮ Enforcement ಆಫೀಸರುಗಳು ತನಿಖೆಮಾಡಿರುವುದರ ಪ್ರಕಾರ ನಮ್ಮಲ್ಲಿ 29,000—30,000 ದಷ್ಟು ಇರಬಹುದೆಂದು ಗೊತ್ತಾಗಿದೆ.

ಶ್ರೀ ಟಿ. ಮಾದಯ್ಯಗೌಡರು.—ಇದುವರೆಗೇನಾದರೂ ಯಾವ ಊರಿನಲ್ಲಿ ಎಷ್ಟೆಷ್ಟು ಮಗ್ಗಗಳಿವೆಯೆಂಬ ವಿಚಾರದಲ್ಲಿ ಸರ್ವೆ ನಡೆಸಿದ್ದೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದನ್ನೆಲ್ಲಾ ಈಗ ತನಿಖೆ ಮಾಡುತ್ತಿದ್ದೇವೆ. ಯಾವಾಗ ಕೈಮಗ್ಗದವರ-ಕೋ-ಆಪರೇಟಿವ್ ಸೊಸೈಟಿಯೆಂಬುದು ಏರ್ಪಾಡಾಯಿತೋ ಅದರ ಸಂಬಂಧದಲ್ಲಿ ಇವೆಲ್ಲಾ ತನಿಖೆಮಾಡಲ್ಪಟ್ಟಿದೆ; ನೋಟೀಸ್ ಕೊಟ್ಟರೆ ಆ ಬಗ್ಗೆ ಅಂಕಿಅಂಶಗಳನ್ನು ತಿಳಿಸುತ್ತೇನೆ.

ಶ್ರೀ ಟಿ. ಮಾದಯ್ಯಗೌಡರು.—ಹೆಚ್ಚಾಗಿನೆಯೆಂದು ತಪ್ಪು ಲೆಕ್ಕ ಕೊಟ್ಟು ಹೆಚ್ಚಿಗೆ ನೂಲು ತೆಗೆದುಕೊಳ್ಳುತ್ತಿದ್ದರೇ ಇಲ್ಲವೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—35,000 ಎಂದು ಲೆಕ್ಕ ಬಂದಿದ್ದು ಹಿಂದಿನ ಸೆನ್ಸಸ್ ಲೆಕ್ಕದ ಪ್ರಕಾರ. ಅದನ್ನೀಗ ಮತ್ತೆ ತನಿಖೆಮಾಡುವುದು ಸಾಧುವಾಗಿದೆ.

ಶ್ರೀ ಟಿ. ಮಾದಯ್ಯಗೌಡರು.—ಮೈಸೂರು ದೇಶಕ್ಕೆ ಮೈಸೂರು ಮಿಲ್ಲುಗಳಿಂದ ಬರದೆ ಬೊಂಬಾಯಿ, ಅಹಮದ್ದಾಬಾದು, ಕೊಯಮತ್ತೂರು, ಮಧುರಾ ಕಡೆಗಳ ಮಿಲ್ಲುಗಳಿಂದ ಬರುತ್ತಿದೆಯೆಂದು ಹೇಳಿದಿರಿ. ಹೀಗೆ ಮೈಸೂರು ದೇಶದ ಮಿಲ್ಲುಗಳಿಂದ ತರಿಸಿಕೊಳ್ಳದೆ ಬೇರೆ ಕಡೆಯಿಂದ ತರಿಸಿಕೊಳ್ಳುವುದು ಒಳ್ಳೆಯದೇ.

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಂಡಿಯಾ ಸರ್ಕಾರದವರು ಮಗ್ಗದವರಿಗೆ ಎಲ್ಲೆಲ್ಲಿಂದ ಕೊಡುತ್ತಾರೋ ಅಲ್ಲಿಂದ ತೆಗೆದುಕೊಳ್ಳಬೇಕು.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರು (ಹಾಸನ ಜಿಲ್ಲೆ).—ಕೈಮಗ್ಗದ ಸೊಸೈಟಿಗಳವರು ಎಲ್ಲಾ ಕೈಮಗ್ಗದವರಿಗೂ ಹೇಗೆ ಸರಬರಾಯಿಮಾಡುತ್ತಾರೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಕೇಂದ್ರ ಸೊಸೈಟಿಗೆ ಸರಬರಾಯಿಮಾಡತಕ್ಕ ನೂಲನ್ನು ಅವರು ತಾಲ್ಲೂಕು ಕೋ-ಆಪರೇಟಿವ್ ಸೊಸೈಟಿಗಳ ಮೂಲಕ ಹಂಚುವ ಏರ್ಪಾಡುಮಾಡುತ್ತಾರೆ.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರು.—ಈ ತಾಲ್ಲೂಕು ಸೊಸೈಟಿಗಳಿಗೆ ಬಂಡವಾಳವಿಲ್ಲದೆ ಸರಬರಾಯಿಮಾಡುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಈಗಿರುವ ಪದ್ಧತಿಯ ಪ್ರಕಾರ ತಾಲ್ಲೂಕು ಸೊಸೈಟಿಗಳವರು ನಗದು ಹಣ ಕೊಟ್ಟೇ ತೆಗೆದುಕೊಳ್ಳಬೇಕಾಗಿದೆ.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರು.—ಅವರಲ್ಲಿ ಬಂಡವಾಳವಿಲ್ಲದೆ ಹೇಗೆ ತೆಗೆದುಕೊಳ್ಳುವುದು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಸೊಸೈಟಿಗಳಲ್ಲಿ ಷೇರು ಹಣವಿರುತ್ತದೆ. ಕೈಮಗ್ಗದವರುಗಳೆಲ್ಲಾ ಸೊಸೈಟಿಯ ಷೇರುದಾರರುಗಳಾಗಿರುತ್ತಾರೆ. ಆ ಷೇರು ಹಣದಿಂದ ಕೊಂಡುಕೊಳ್ಳಬಹುದು.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರು.—ಒಂದುವೇಳೆ ಹೊಸದಾಗಿ ಸೊಸೈಟಿ ಏರ್ಪಾಡಾಗಿ, ಅವರಲ್ಲಿ ಷೇರು ಹಣ ಪೂರ್ತಿ ಕೈಸೇರಿರುವುದಿಲ್ಲ; ಅವರಿಗೆ ಐದಾರು ಸಾವಿರ ರೂಪಾಯಿಗಳ ನೂಲು ಬೇಕಾದರೆ ಹೇಗೆ ತೆಗೆದುಕೊಳ್ಳುವುದು?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ತಾವು ಊಹೆಯ ಮೇಲೆ ಹೇಳುತ್ತಿದ್ದೀರಿ.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರು.—ಊಹೆಯಲ್ಲ; ವಾಸ್ತವವಾಗಿ ಹಾಗೆಯೇ ಇದೆ. ನಮ್ಮ ಹೊಳೇನರಸೀಪುರದ ಸೊಸೈಟಿಯಲ್ಲಿ ಕೇವಲ ಸಾವಿರ ರೂಪಾಯಿ ಜಮಾ ಆಗಿದೆ. ಅವರಿಗೀಗ ನೀವು ಸಹಾಯ ಮಾಡಬೇಕಾಗಿದೆ. ಸಹಾಯಮಾಡುತ್ತೀರಾ?

Mr. SPEAKER.—The Hon'ble Member is making a statement!

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರು.—ನಾನು ಹೇಳಿದ್ದು ಊಹೆಯಲ್ಲವೆಂಬುದನ್ನು ವಿವರಿಸುತ್ತಿದ್ದೇನೆ.

ಅಧ್ಯಕ್ಷರು.—ತಾವು ಹೇಳುವುದು ವಿವರಣೆಯಾಯಿತು. ವಿಷಯವೇನಾದರೂ ತಿಳಿದುಕೊಳ್ಳಬೇಕಾದ್ದಿದ್ದರೆ ಕೇಳಿ.

ಶ್ರೀ ಎಸ್. ಸಿ. ಸೂರ್ಯನಾರಾಯಣಶೆಟ್ಟರು.—ಅಂಥಾ ಸಂದರ್ಭದಲ್ಲಿ, ಆ ಸೊಸೈಟಿಗಳಪರೆಗೇನಾದರೂ ತಾವು ಸಹಾಯಮಾಡುತ್ತೀರಾ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅದು ಹಣಕಾಸಿಗೆ ಸಂಬಂಧಪಟ್ಟ ವಿಚಾರ; ಯೋಚನೆಮಾಡಿ ಹೇಳಬೇಕು.

Sri G. A. ACHARYA (Bangalore District-General).—I want to know whether the Government have supplied on credit yarn according to this allotment to any Co-operative Society?

The Hon'ble Sri T. MARIAPPA.—All cash sales.

ಶ್ರೀ ಎಂ. ಮಾದಯ್ಯನವರು (ಮೈಸೂರು ಜಿಲ್ಲೆ—ನಿಮ್ಮ ಪಂಗಡ).—ಸರ್ಕಾರದವರು ಕೊಡತಕ್ಕ ಬೇಲುಗಳು ಕೈಮಗ್ಗದವರಿಗೆ ಸರಿಯಾಗಿ ಸರಬರಾಯಿಯಾಗುತ್ತಿಲ್ಲವೆಂದು ದೂರುಗಳೇನಾದರೂ ತಮಗೆ ಬಂದಿವೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನಿರ್ದಿಷ್ಟವಾಗಿ ಹಾಗೆ ದೂರುಗಳೇನೂ ಬಂದಿಲ್ಲ. ನೂಲು ಸಾಲದೆಂದು ತಿಳಿದುಬಂದಿದೆ.

ಶ್ರೀ ಎಂ. ಮಾದಯ್ಯನವರು.—ನಾನು ಹೇಳುವುದು ಅದಲ್ಲ; ಈಗ ತಾವೇನು ಹಂಚಿಕೆಗಾಗಿ ಕೊಡುತ್ತಿದ್ದೀರೋ ಅದು ಕೈಮಗ್ಗದವರಿಗೆ ತಲಪುತ್ತಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ.

ಶ್ರೀ ಎಂ. ಮಾದಯ್ಯನವರು.—ಸರ್ಕಾರದವರು ನೂಲನ್ನು ಅವರುಗಳಿಗೆ ಹಂಚಲು ಮಾಡಿರುವ ಏರ್ಪಾಡುಗಳು ಅತ್ಯಪ್ತಿಕರವಾಗಿವೆಯೆಂಬುದು ತಮ್ಮ ಗಮನಕ್ಕೆ ಬಂದಿದೆಯೇ; ಈ ಕೇಂದ್ರ ಸೊಸೈಟಿಯವರು ಸರಿಯಾಗಿ ಹಂಚುತ್ತಿಲ್ಲ, ಅದಕ್ಕೆ ಸೂಕ್ತ ಏರ್ಪಾಡು ಮಾಡಬೇಕಾಗಿದೆಯೆಂಬುದು ತಮಗೆ ತಿಳಿದಿದೆಯೇ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಅವರ ಪ್ರಶ್ನೆ ನನಗೆ ಅರ್ಥವಾಗುತ್ತಿಲ್ಲ. ಕೇಂದ್ರ ಕೋ-ಆಪರೇಟಿವ್ ಸೊಸೈಟಿಯನ್ನು ಇನ್ನೂ ಪ್ರಾರಂಭವೇ ಮಾಡಿಲ್ಲ! ಅಂದಮೇಲೆ ಅದರಮೇಲೆ ದೂರುಗಳು ಹೇಗೆ ಬರುತ್ತವೆ?

ಶ್ರೀ ಎಂ. ಮಾದಯ್ಯನವರು.—ಮಂಡ್ಯ ಜಿಲ್ಲೆಯಲ್ಲಿ ಅನೇಕ ಗ್ರಾಮಾಂತರ ಪ್ರದೇಶಗಳಲ್ಲಿರುವ ಕೈಮಗ್ಗದವರಿಗೆ ಸರಿಯಾಗಿ ನೂಲು ಸರಬರಾಯಾಗುತ್ತಿಲ್ಲವೆಂದು ದೂರುಗಳು ಬಂದಿಲ್ಲವೆ? ಈಗ ಕೊತ್ತನಹಳ್ಳಿ ಸರ್ಕಾರ ಡಿಪೋಏಜೆಂಟರಿಂದ ನೂಲನ್ನು ಸರಬರಾಯಮಾಡಿದ್ದರೂ ಡಿಪೋಗಳವರು ಹಂಚುತ್ತಿಲ್ಲವೆಂದು ದೂರು ಬಂದಿಲ್ಲವೇ?

* ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—ಕೆಲವು ಕಡೆಗಳಿಂದ ಬಂದಿವೆ. ತಪ್ಪಿತಸ್ಥರಮೇಲೆ ಸೂಕ್ತ ಕಾರ್ಯಕ್ರಮ ತೆಗೆದುಕೊಂಡಿದ್ದೇವೆ. ಎಲ್ಲದೆ-ಈ ಏರ್ಪಾಡನ್ನು ನುವ್ಯವನ್ನುಗೊಳಿಸುವ ಉದ್ದೇಶದಿಂದ ಮದ್ರಾಸಿನಲ್ಲಿ ಮಾಡಿರುವಂತೆ ಇಲ್ಲಿಯೂ ಪ್ರೊವಿಷಿಯರ್ ಕಾರ್ಪೊರೇಷನ್ ಹ್ಯಾಂಡ್‌ಲೂಮ್ ವೀವರ್ಸ್ ಕೋ-ಆಪರೇಟಿವ್ ಸೊಸೈಟಿಯನ್ನು ಏರ್ಪಾಡುಮಾಡಿ, ಆದರ ಮೂಲಕ ಮಗ್ಗದ ವರಿಗೆ ಸಲ್ಲತಕ್ಕ ಎಲ್ಲ ಪದಾರ್ಥಗಳೂ, ಅವರು ಎಲ್ಲೇ ಇರಲಿ, ಕನ್ಯಾಕುಮಾರಿಯಲ್ಲಿರಲಿ, ಅವರಿಗೆ ಸರಬರಾಯಿ ಮಾಡುವುದಕ್ಕೆ ಒಂದು ಯೋಜನೆ ತಯಾರಾಗಿದೆ. ಕ್ರಮೇಣ ಪ್ರೊವಿಷಿಯರ್ ಮತ್ತು ಬ್ರಾಂಚ್ ಸೊಸೈಟಿಗಳ ಮೂಲಕ ನೂಲನ್ನು ಸರಬರಾಯಿಮಾಡುವ ಏರ್ಪಾಡಾಗುತ್ತದೆ.

ಇನ್ನೊಂದು ವಿಷಯವನ್ನು ಈ ಸಂದರ್ಭದಲ್ಲಿ ಹೇಳಬೇಕಾಗಿದೆ. ಮೊನ್ನೆ ಮಾನ್ಯ ಶ್ರೀಹರಿಕೃಷ್ಣ ಮೆಹತಾಬ್‌ರವರು ಮದ್ರಾಸಿಗೆ ಬಂದಿದ್ದಾಗ, ಕೈಮಗ್ಗದವರಿಗೆ ಸಂಬಂಧಪಟ್ಟ ವಿಷಯಗಳಲ್ಲಿ ಮಾತನಾಡುತ್ತಾ, ಬರುವ ಏಪ್ರಿಲ್ ತಿಂಗಳ ಹೊತ್ತಿಗೆ ಪರಿಸ್ಥಿತಿ ಬಹುಮಟ್ಟಿಗೆ ಸುಧಾರಿತವಾಗುತ್ತದೆಂದು ಹೇಳಿದ್ದಾರೆ. ಇದನ್ನೂ ಮಾನ್ಯ ಸದಸ್ಯರು ಗಮನಿಸಬೇಕು.

ಶ್ರೀ ಎಂ. ಮಾದಯ್ಯನವರು.— ಸರ್ಕಾರದವರು ಸಿವಿಲ್ ಸಪ್ಲೈಸ್ ಡೈರೆಕ್ಟರವರ ಅಥವ ಕೈಗಾರಿಕೆ ಮತ್ತು ವಾಣಿಜ್ಯ ಡೈರೆಕ್ಟರವರ ಮೂಲಕ ಡಿಪೋಗಳಿಗೆ ಕೊಡುತ್ತಿರುವ ಬೇಲುಗಳು ಸರಿಯಾಗಿ ಮಾರಾಟವಾಗುತ್ತವೆಯೇ ಅಥವಾ ಇಲ್ಲವೆ ಎಂಬ ಬಗ್ಗೆ ವರದಿಯೇನಾದರೂ ಬರುತ್ತವೆಯೇ?

The Hon'ble Sri H. C. DASAPPA.—The concerned Department will get the reports and if there is any complaint, they will also reach the Department, and suitable action will be taken wherever they go wrong.

ಶ್ರೀ ಎಂ. ಎಕ್. ಜೋಯಿಸರು (ಮೈಸೂರು ಜಿಲ್ಲೆ).—ಸರ್ಕಾರಿ ಡಿಪೋಗಳಿಂದ ಸರಬರಾಯಾಗ ಬೇಕಾದವರಿಗೆ ಆಗಿಲ್ಲದೆಯಿದ್ದರೆ ಅದಕ್ಕೆ ಸರಿಯಾದ ಕಾರ್ಯಕ್ರಮ ತೆಗೆದುಕೊಂಡಿದ್ದೇವೆಂದು ಹೇಳಿದಿರಿ, ಆ ಕಾರ್ಯಕ್ರಮಗಳೇನೆಂಬ ಬಗ್ಗೆ ಒಂದೆರಡನ್ನಾದರೂ ಹೇಳುತ್ತೀರಾ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.— ಹೆಸರು, ಕುಲ, ಗೋತ್ರ ಇವುಗಳನ್ನೆಲ್ಲಾ ಇಲ್ಲಿ ಈಗ ಹೇಳುವುದಕ್ಕಾಗುವುದಿಲ್ಲ. ಬೇಕಾದರೆ ಆಮೇಲೆ ಆ ವಿವರಗಳನ್ನು ತಿಳಿಸುತ್ತೇನೆ.

ಶ್ರೀ ಟಿ. ರಾಮಾಚಾರ್ಯರು (ಕೋಲಾರ ಜಿಲ್ಲೆ).— ಸರ್ಕಾರಕ್ಕೆ ಬರುವ ನೂಲಿನ ಕೋಟಾದಲ್ಲಿ ರೇಷ್ಮೆ ಮಿಲ್ಲುಗಳಿಗೂ ಕೋಟಾ ಕೊಡುತ್ತಾರೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಇಲ್ಲ. ದೊಡ್ಡ ಬಳ್ಳಾಪುರದಲ್ಲಿ ಆ ರೀತಿ ಕೊಟ್ಟ ಸಂದರ್ಭ ಗಮನಕ್ಕೆ ಬಂದು, ಅದನ್ನು ಸರಿಪಡಿಸಲಾಯಿತು.

ಶ್ರೀ ಟಿ. ರಾಮಾಚಾರ್ಯರು.—ಶಿಡ್ಲಘಟ್ಟದಲ್ಲಿರುವ ಕಿರ್ಲಾಸ್ಕರ್ ಸಿರ್ಕ್ ಮಿರ್ಸ್‌ಗೆ ನೂಲನ್ನು ಕೊಡುತ್ತಿದ್ದಾರೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ನೋಟೀಸ್.

Janab J. MOHAMED VALIULLA (Kolar-Muslim).—What is the amount of scholarship that is allotted in the budget?

The Hon'ble Sri H. C. DASAPPA.—Notice.

Janab MOHAMED VALIULLA.—For how many students are you going to give scholarships?

The Hon'ble Sri H. C. DASAPPA.—Notice.

Janab MOHAMED VALIULLA.—It is mentioned in clause (g) of the answer; that handicom cloth is partially exempted from the levy of sales-tax. May I know what would have been the total realisation under sales-tax if such an exemption had not been given?

The Hon'ble Sri H. C. DASAPPA.—There are no figures available for that. Tax is collected at only one point; when the goods reach the consumer.

ಶ್ರೀ ನುಬ್ಬರಾಯಶೆಟ್ಟರು (ಕೋಲಾರ ಜಿಲ್ಲೆ).— ಕೋಟಾ ಲ್ಯಾಪ್ಸ್ ಆದರೆ ಅದನ್ನು ಯಾವ ರೀತಿ ಹಂಚುತ್ತೀರಿ?

ಮಾನ್ಯ ಶ್ರೀ ಎಚ್. ಸಿ. ದಾಸಪ್ಪನವರು.—There is no prospect of lapse now-a-days. Shortage ಇರುವಾಗ ಲ್ಯಾಪ್ಸ್ ಆಗುವ ಪ್ರಶ್ನೆಯೇ ಬರುವುದಿಲ್ಲ. ಹಿಂದೆ ಹೆಚ್ಚಾಗಿದ್ದಾಗ ಮಿಕ್ಕ ಕೈಮಗ್ಗದವರಿಗೇ ಸ್ವಲ್ಪ ಸ್ವಲ್ಪ ಕೊಡುತ್ತಿದ್ದೆವು, ಹಾಗೇ ಕೊಟ್ಟಿದ್ದೇವೆ.

ಶ್ರೀ ನುಬ್ಬರಾಯಶೆಟ್ಟರು.—ಬೇರೆಕಡೆ ಲ್ಯಾಪ್ಸ್ ಆಗಿರುವುದನ್ನು ಬೆಂಗಳೂರಿಗೆ ಕೊಟ್ಟಿದ್ದೀರಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.— ಅನ್ಯಾಯವಾಗಿ ಲ್ಯಾಪ್ಸ್ ಆಗಿ ಹೋಗುತ್ತದೆಂದು ಕಂಡ ಕೆಲವು ಸಂದರ್ಭಗಳಲ್ಲಿ ಮಾತ್ರ ಹಾಗೆ ಕೊಟ್ಟಿದ್ದೇವೆ.

ಶ್ರೀ ನುಬ್ಬರಾಯಶೆಟ್ಟರು.—ಆಮೇಲೆ ಅವರಿಗೆ ಕೊಡಬಹುದಲ್ಲವೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಯಾ ತಿಂಗಳಲ್ಲೇ ಕೊಡಬೇಕಾಗುತ್ತದೆ.

ಶ್ರೀ ಟಿ. ಹನುಮಯ್ಯನವರು (ಚಿತ್ರದುರ್ಗ ಜಿಲ್ಲೆ—ನಿಮ್ನ ಪ್ರಗದ).—ಗ್ರಾಮಾಂತರಗಳಲ್ಲಿರುವ ಕೈಮಗ್ಗದವರಿಗೆ ನೂಲು ಸರಿಯಾಗಿ ಸಿಕ್ಕುತ್ತಿಲ್ಲವೆಂಬುದು ಗಮನಕ್ಕೆ ಬಂದಿದೆಯೆ?

ಮಾನ್ಯ ಶ್ರೀ ಟಿ. ಮರಿಯಪ್ಪನವರು.—ಆಗಲೇ ಉತ್ತರ ಹೇಳಿದ್ದೇನೆ.

Mr. SPEAKER.—Next question, No. 37 Sri. M. V. Krishnappa.

Indianisation of the Kolar Gold Mines

*Q. 37.—Sri M. V. KRISHNAPPA (Kolar District—General).—

Will the Government be pleased to state.—

the measures taken by them to indianise the "Kolar Gold Mines"?